# ಇಂದಿನ ವಿಶ್ವದ ಬಗ್ಗೆ ನೀನೇನನ್ನು ಕಲಿತೆ?

ಪ್ರಾರ್ಥನಾ ಮುದ್ಗಲ್, ಭೋಪಾಲ್‌ನ ಖಾಸಗಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿ. ಮಾರ್ಚ್‌ನಲ್ಲಿ ಶಾಲೆಗಳು ಮುಚ್ಚಿದ ಸಂದರ್ಭದಲ್ಲಿಯೇ ಆಕೆಯ ಅಚ್ಚುಮೆಚ್ಚಿನ ಅಜ್ಜಿ ತೀರಿಕೊಂಡರು. ಇದರ ಆಘಾತದಿಂದ ಆಕೆಗೆ ಹೊರಬರುವುದು ಕಷ್ಟವಾಯಿತು. ಉತ್ತರಭಾರತದ ಬೇಸಿಗೆಯ ಧಗೆಗೆ ಮನೆಯೊಳಗೇ ಇರುವುದು ಆರಂಭದಲ್ಲಿ ತಾತ್ಕಾಲಿಕ ವಿನಾಯಿತಿಯಾಗಿತ್ತು. ಜೊತೆಗೆ ಹೀಗೆ ಅನಿರೀಕ್ಷಿತವಾಗಿ ಒದಗಿಬರುವ ರಜೆಗಳೆಂದರೆ ಸದಾ ಸ್ವಾಗತಿಸುತ್ತಿದ್ದರು. ಆದರೆ ಮಕ್ಕಳು ಸುಮ್ಮನಿರುವ ಜಾಯಮಾನದವರಲ್ಲ. ಪ್ರಾರ್ಥನಾ ಕೂಡ ಈ ವಿರಾಮದ ದಿನಗಳಲ್ಲಿ ತಾನು ಏನೇನು ಮಾಡಬಹುದು ಎಂಬುದನ್ನು ಯೋಚಿಸಲು ಆರಂಭಿಸಿದಳು. ಕೊನೆಗೆ ಆಕೆ ಮಾಡಿದ ಸಾಧನೆ ನಿಜಕ್ಕೂ ಗಮನಾರ್ಹವಾದುದು. ಕೇವಲ ಗಂಟೆಗಳು ಮಾತ್ರವಲ್ಲದೆ ದಿನ, ವಾರ ಮತ್ತು ತಿಂಗಳುಗಳ ಕಾಲ ಟೀವಿ, ಲ್ಯಾಪ್‌ಟಾಪ್ ಮತ್ತು ಫೋನ್‌ಗಳೊಂದಿಗೆ ಕಳೆದು ಹೋಗುವ ಮಕ್ಕಳಿಗೆ ಇದು ಎಷ್ಟು ಸುಲಭ ಎಂದು ಅನಿಸಿಬಿಡುತ್ತದೆ.

ತಾನು ಮಾಡಿದ ಕೆಲಸವನ್ನು ಆಕೆ ಅಸಾಮಾನ್ಯ ಎಂದೇನೂ ಭಾವಿಸಲಿಲ್ಲ ಮತ್ತು ತನ್ನ ಕೆಲಸದ ಬಗ್ಗೆ ಮಾತನಾಡುವುದು ಆಕೆಗೆ ಮುಜುಗರದ ವಿಷಯವಾಗಿತ್ತು. ಆದರೆ ಲಾಕ್‌ಡೌನ್ ಸಂದರ್ಭದಲ್ಲಿ ತಾನು ಮಾಡಿದ ಕೆಲಸದ ಬಗ್ಗೆ ತಿಳಿಸುವಂತೆ ಆಕೆಯನ್ನು ನಾವು ಪುಸಲಾಯಿಸಬೇಕಾಯಿತು.

ತನ್ನ ಇತರ ಸಹಪಾಠಿಗಳಂತೆ ಪ್ರಾರ್ಥನಾ, ಮಾರ್ಚ್‌ನಲ್ಲಿ ತನ್ನ ಶಾಲೆಯಲ್ಲಿ ಆರಂಭವಾದ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಆರಂಭಿಸಿದಳು. ಆದರೆ ಆನ್‌ಲೈನ್ ಮಾದರಿಯ ಅಧ್ಯಯನ ಆಕೆಗೆ ಒಗ್ಗಲಿಲ್ಲ. ಹಾಗಾಗಿ ಆನ್‌ಲೈನ್ ಕ್ಲಾಸ್‌ಗಳಿಗೆ ಹಾಜರಾಗುವುದನ್ನೇ ಕಡಿಮೆ ಮಾಡಿ ಕೊನೆಗೊಂದು ದಿನ ಸಂಪೂರ್ಣವಾಗಿ ಅದನ್ನು ತ್ಯಜಿಸಿಯೇ ಬಿಟ್ಟಳು. ಆಕೆಯ ಪಾಲಕರು ಮತ್ತು ಶಿಕ್ಷಕರು ಈ ಬಗ್ಗೆ ಚರ್ಚಿಸಿದಾಗ, ಆನ್‌ಲೈನ್ ವಿಧಾನದಲ್ಲಿ ತೊಡಗಿಕೊಳ್ಳಲು ಪ್ರಾರ್ಥನಾಗೆ ತನ್ನ ಶ್ರವಣಸಾಧನ ತೊಡಕಾಗಿದೆ ಎಂಬುದು ತಿಳಿದು, ಅವಳನ್ನು ಅವಳ ಪಾಡಿಗೆ ಬಿಟ್ಟುಬಿಡಲು ನಿರ್ಧರಿಸಿದರು. ಈ ಹೊಸ ಮಾಧ್ಯಮದ ಕಲಿಕೆಯೊಂದಿಗೆ ಹೊಂದಿಕೊಳ್ಳಲಾಗದ ಹತಾಶ ಸ್ಥಿತಿ ಇತರ ಕೆಲವು ಭಾವನಾತ್ಮಕ ಸಂಗತಿಗಳಿಗೆ ಕಾರಣವಾದೀತು ಎಂಬ ಅರಿವು ಅವರಿಗಿತ್ತು.

ಬಿಡುವಿನ ಸಮಯದಲ್ಲಿ ಏನು ಮಾಡುವುದು ಎಂದು ಯೋಚಿಸಿದಾಗ ಪ್ರಾರ್ಥನಾಗೆ ಹೊಳೆದಿದ್ದು ಮಾಸ್ಕ್ ತಯಾರಿಕೆ; ಆ ಹೊತ್ತಿಗೆ ಅದಿನ್ನೂ ಸುಲಭದ ಕೆಲಸವಾಗಿರಲಿಲ್ಲ. ಕೇವಲ ಒಂದೇ ದಿನದಲ್ಲಿ ಮನೆಯಲ್ಲಿಯೇ ಇದ್ದ ಹೊಲಿಗೆ ಯಂತ್ರವನ್ನು ನಿರ್ವಹಿಸುವುದನ್ನು ಕಲಿತ ಆಕೆ ಯೂಟ್ಯೂಬ್ ನೋಡಿಕೊಂಡು ಮಾಸ್ಕ್ ಹೊಲಿಯವುದನ್ನು ಕೂಡ ಕರಗತ ಮಾಡಿಕೊಂಡಳು. ಮುಂದಿನ ಕೆಲ ವಾರಗಳಲ್ಲಿಯೇ ಮನೆಯಲ್ಲಿರುವ ಬಟ್ಟೆ, ನೂಲು ಮತ್ತು ಇಲಾಸ್ಟಿಕ್‌ಗಳನ್ನು ಬಳಸಿಕೊಂಡು ಡಜನ್‌ಗಟ್ಟಲೆ ಮಾಸ್ಕ್‌ಗಳನ್ನು ತಯಾರಿಸಿದಳು. ದೇಶದಲ್ಲಿ ಲಾಕ್‌ಡೌನ್ ಇದ್ದ ಸಂದರ್ಭದಲ್ಲಿಯೂ ಅವಶ್ಯಕ ಸೇವೆಗಳಾಗಿ ಕೆಲಸ ಮಾಡುತ್ತಿದ್ದ ಪೆಟ್ರೋಲ್ ಪಂಪ್‌ನ ನೌಕರರಿಗೆ ಈ ಮಾಸ್ಕ್‌ಗಳು ಅತ್ಯಗತ್ಯವಾಗಿದ್ದವು. ಇದಕ್ಕಾಗಿ ಹಣ ಪಾವತಿ ಮಾಡುವುದಾಗಿ ಅವರು ಹೇಳಿದರೂ ಕೂಡ, ಹಣಕ್ಕೆ ಬದಲಾಗಿ ಮಾಸ್ಕ್‌ಗೆ ಬೇಕಾದ ಇನ್ನಷ್ಟು ಸಾಮಗ್ರಿಗಳನ್ನು ತಂದು-ಕೊಡುವಂತೆ ಕೇಳಿಕೊಂಡಳು.

ಈ ನಡುವೆ ಒಂದು ದಿನ ಪ್ರಾರ್ಥನಾ ತನ್ನ ತಂದೆಯ ಜೊತೆ ಹತ್ತಿರದಲ್ಲೇ ಇದ್ದ ಔಷಧಿ ಅಂಗಡಿಗೆ ಭೇಟಿ ನೀಡಿದಳು. ಆಗ ಅವಳಿಗೆ ಕೆಲವು ಪ್ರಶ್ನೆಗಳು ಎದುರಾದವು. ಎಲ್ಲರೂ ಮನೆಯೊಳಗೆ ಸೇರಿಕೊಂಡಿರುವಾಗ ಎಲ್ಲರಿಗಾಗಿ ಇವರು ಯಾಕೆ ನಿರಂತರ ಕೆಲಸ ಮಾಡುತ್ತಿದ್ದಾರೆ; ಯಾವಾಗ ಅವರು ತಿಂಡಿ ತಿನ್ನುತ್ತಾರೆ, ಯಾವಾಗ ವಿಶ್ರಾಂತಿ ಪಡೆಯುತ್ತಾರೆ? ಎಂಬುದು ಅವಳ ಪ್ರಶ್ನೆಯಾಗಿತ್ತು. ಔಷಧಿ ಅಂಗಡಿಯ ನೌಕರರು ನಮಗಾಗಿ ಅಂಗಡಿಯನ್ನು ಬೆಳಗ್ಗೆ 7 ಗಂಟೆಯಿಂದ ರಾತ್ರಿ 11 ಗಂಟೆ ತನಕ ತೆರೆದಿರುತ್ತಾರೆ, ಅವರಿಗೆ ವಿಶ್ರಾಂತಿಯೂ ಇಲ್ಲ, ಒಂದು ಕಪ್ ಟೀ ಕುಡಿಯಬೇಕೆಂದರೆ ಸುತ್ತಮುತ್ತ ಟೀ ಅಂಗಡಿಯೂ ಇಲ್ಲ ಎಂಬುದು ಆಕೆಯನ್ನು ಬಹುವಾಗಿ ಕಾಡಿತು. ನಮಗಾಗಿ ಸೇವೆ ಮಾಡುತ್ತಿರುವ ಅವರಿಗೆ ನಾವು ಸೇವೆ ಮಾಡಬೇಕು ಎಂಬುದು ಆಕೆಯ ತಂದೆಯ ಕಳಕಳಿಯಾಗಿತ್ತು. ಅಂದಿನಿಂದಲೇ ಪ್ರಾರ್ಥನಾ, ಅವರಿಗಾಗಿ ಚಹಾ ಮಾಡಿಕೊಡಲು ಶುರುಮಾಡಿದಳು. ಪ್ರತಿ ದಿನ ಟೀ ಮಾಡಿ ಒಂದು ಲೀಟರ್ ಗಾತ್ರದ ಫ್ಲಾಸ್ಕ್‌ನಲ್ಲಿ ಅದನ್ನು ಕೊಂಡೊಯ್ದು ಔಷಧಿ ಅಂಗಡಿಗೆ ಸರಬರಾಜು ಮಾಡುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಆಕೆ ಬಿಸ್ಕೆಟ್ ಪಾಕೆಟ್‌ಗಳನ್ನೂ ಕೊಂಡೊಯ್ಯುತ್ತಿದ್ದಳು.

ಈ ನಡುವೆ ರಾತ್ರಿ ವೇಳೆ ಆಕೆಯ ಕುಟುಂಬ 40–50 ಹೆಚ್ಚು ರೊಟ್ಟಿ-ಗಳನ್ನು ಮಾಡಿ ಅವುಗಳನ್ನು ಸುತ್ತಮುತ್ತ ಇರುವ ಬೀದಿನಾಯಿಗಳಿಗೆ ಹಾಕುತ್ತಿದ್ದರು. ಪ್ರತಿ ದಿನ ಅವರು ನೆರೆಹೊರೆಯ ಕನಿಷ್ಠ ಐದರಿಂದ ಏಳು ಬಡಾವಣೆಗಳಲ್ಲಿ ಈ ಕೆಲಸ ಮಾಡುತ್ತಿದ್ದರು. ಇವೆಲ್ಲವನ್ನು ಮಾಡುತ್ತಿರುವಾಗಲೇ ಆಕೆ ಪರರ ಬಗ್ಗೆ ಸಹಾನು-ಭೂತಿಯನ್ನೂ ಬೆಳೆಸಿಕೊಂಡಳು. ರಸ್ತೆ ಬದಿಯಲ್ಲಿ ನಾಯಿಯೊಂದು ಕದಲಲೂ ಸಾಧ್ಯವಾಗದೇ ಬಿದ್ದುಕೊಂಡಿತ್ತು. ಏನನ್ನೂ ತಿನ್ನುತ್ತಿರಲಿಲ್ಲ, ಕುಡಿಯುತ್ತಿರಲಿಲ್ಲ. ತಕ್ಷಣ ತನ್ನ ಅಪ್ಪನಿಗೆ ಫೋನ್ ಮಾಡಿ ವಿಷಯ ತಿಳಿಸಿದ ಆಕೆ, ಅದನ್ನು ಆಸ್ಪತ್ರೆಗೆ ಕೊಂಡೊಯ್ಯಲು ಆ್ಯಂಬುಲೆನ್ಸ್ ಬರುವ ತನಕವೂ ಕಾದು ಆರೈಕೆ ಮಾಡಿದಳು.

ದೇಶದಲ್ಲಿ ಲಾಕ್‌ಡೌನ್ ತೆರವು ಮಾಡಿದ ತಕ್ಷಣ ಆಕೆಯ ತಂದೆ ನಡೆಸುತ್ತಿದ್ದ ಎನ್‌ಜಿಓ ಕಾರ್ಯಾಚರಣೆ ಶುರುಮಾಡಿಕೊಂಡಿತು. ಆ ಹೊತ್ತಿನಲ್ಲಿ ಎಲ್ಲ ಕಡೆ ಸ್ಯಾನಿಟೈಸರ್‌ನ ಅಗತ್ಯವಿತ್ತು. ಇದು ಆಕೆಯ ಮುಂದಿನ ದೊಡ್ಡ ಯೋಜನೆಯಾಯಿತು. ಮತ್ತೆ ಯೂಟ್ಯೂಬ್‌ನ್ನು ನೋಡಿ ಕೈ ಸ್ವಚ್ಛಗೊಳಿಸುವ ಸ್ಯಾನಿಟೈಸರ್ ತಯಾರಿಸುವುದು ಹೇಗೆ ಎಂಬುದನ್ನು ಕಲಿತುಕೊಂಡಳು. ಅದಕ್ಕಾಗಿ ತಮ್ಮ ಮನೆಯಲ್ಲಿಯೇ ಸಾಕಷ್ಟು ಪ್ರಮಾಣದಲ್ಲಿ ಬೆಳೆದಿರುವ ಅಲೋವೇರಾ (ಲೋಳೆರಸ) ಹಾಗು ಸ್ಪಿರಿಟ್‌ನಂತಹ ಘಟಕಾಂಶಗಳನ್ನು ಸಿದ್ಧಪಡಿಸಿಕೊಂಡಳು. ಎನ್‌ಜಿಓದಿಂದ ಸಹಾಯ ಪಡೆಯಲು ಬಂದವರಿಗೆ ಸಾಬೂನು

ಮತ್ತು ಸ್ಯಾನಿಟೈಸರ್ ಖರೀದಿಸಲು ಸಾಮರ್ಥ್ಯವಿಲ್ಲ; ಅಂಥವರಿಗೆ ಪ್ರಾರ್ಥನಾ ಮನೆಯಲ್ಲಿಯೇ ತಯಾರಿಸಿದ ಸ್ಯಾನಿಟೈಸರ್ ದ್ರವವನ್ನು ಒದಗಿಸಿದಳು.

ಇವೆಲ್ಲವನ್ನು ಗಮನಿಸಿದ ನಂತರವೂ ಪ್ರಾರ್ಥನಾ ತನ್ನ ಕಲಿಕೆಯಲ್ಲಿ ಹಿಂದೆ ಉಳಿದಿದ್ದಾಳೆ ಎಂದು ಊಹಿಸುವುದು ಸರಿಯಾದೀತೇ? ಒಂದಲ್ಲ ಒಂದು ದಿನ ಆಕೆ ಶಾಲೆಗೆ ಮರಳಲಿದ್ದಾಳೆ, ತನ್ನ ಬೆಂಚಿನ ಮೇಲೆ ಕುಳಿತು ಗುಣಾಕಾರ, ಭಾಗಾಕಾರ ಕಲಿಯುವುದನ್ನು ಮುಂದುವರಿಸಲಿದ್ದಾಳೆ. ಆದರೆ ಇತರರಿಗಾಗಿ ಸಹಾಯ ಮಾಡು ಎಂದು ಯಾವ ತರಗತಿ ಆಕೆಗೆ ಕಲಿಸುತ್ತದೆ? ತನ್ನ ಸಮಯವನ್ನು ರಚನಾತ್ಮಕವಾಗಿ ಬಳಸಿಕೊಳ್ಳುವಂತೆ ಹೇಳುತ್ತದೆ? ದುರ್ಬಲರ ಬಗ್ಗೆ ಸಹಾನುಭೂತಿ ಬೆಳೆಸಿಕೊಳ್ಳುವುದನ್ನು ಕಲಿಸಿಕೊಡುತ್ತದೆ? ನಮಗಾಗಿ ಸೇವೆ ಮಾಡುವರಿಗಾಗಿ ನಾವು ಸೇವೆ ಮಾಡುವ ಮನೋಭಾವ ಬೆಳೆಸಿಕೊಳ್ಳುವಂತೆ ತಿಳಿಸುತ್ತದೆ? ಮನೆಯಲ್ಲಿ ಮಕ್ಕಳೊಂದಿಗೆ ಮಾತನಾಡಿ ಅವರಿಗೆ ಸೂಕ್ತ ನಿದರ್ಶನಗಳನ್ನು ನೀಡಲು ಮತ್ತು ನಮ್ಮ ಜೀವನದಲ್ಲಿ ಬರುವ ಅನೇಕ ಸಂಗತಿಗಳ ಬಗೆಗೆ ಚರ್ಚಿಸಲು ಲಾಕ್‌ಡೌನ್ ಪಾಲಕರಿಗೆ ಸುವರ್ಣಾ-ವಕಾಶವನ್ನು ಒದಗಿಸಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

**ಲರ್ನಿಂಗ್ ಕರ್ವ್‌ಗೆ ತಿಳಿಸಿದಂತೆ**

---

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ನಾಗಮಣಿ ಎನ್. ಎಸ್**